# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

127

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seechnkodagu@cescmysore.org

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2018-19/ eg - 190 ದಿನಾಂಕ:31.12.2018 01/01/19

## ಸಭೆಯ ನಡಾವಳಿಗಳು

ದಿನಾಂಕ 21.12.2018 ರಂದು ಸಂತೇಮರಳ್ಳಿ ಉಪವಿಭಾಗದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ.ಬಿ.ಎಸ್.ಉಮೇಶ್ : ಅಧೀಕ್ಷಕ ಇಂಜಿನಿಯರ್ (ವಿ), ಚಾ.ನಗರ-ಕೊಡಗು ವೃತ್ತ.
2. ಶ್ರೀ.ಪೂರ್ಣಚಂದ್ರ ತೇಜಸ್ವಿ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ನಗರ ವಿಭಾಗ.
3. ಶ್ರೀ.ಭಾಸ್ಕರ : ಲೆಕ್ಕಾಧಿಕಾರಿಗಳು, ಚಾಮರಾಜನಗರ ವಿಭಾಗೀಯ ಕಛೇರಿ
4. ಶ್ರೀ ಬೆಳ್ಳಯ್ಯ : ಲೆಕ್ಕಾಧಿಕಾರಿಗಳು, (ಆಂ.ಪ), ಚಾಮರಾಜನಗರ ವಿಭಾಗೀಯ ಕಛೇರಿ
5. ಶ್ರೀ.ಜೆ.ಎಂ.ಶಶಿಧರ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಸಂತೇಮರಳ್ಳಿ ಉಪವಿಭಾಗ
6. ಶ್ರೀಮುದ್ದುರಾಜ್ ಕೆ.ಎಂ. : ಸಹಾಯಕ ಇಂಜಿನಿಯರ್(ವಿ) ತಾಂತ್ರಿಕ ಶಾಖೆ ಸಂತೇಮರಳ್ಳಿ ಉಪವಿಭಾಗ
7. ಶ್ರೀ ಜನಾರ್ಧನ್ : ಹಿರಿಯ ಸಹಾಯಕ(ಪ್ರಭಾರ) ಕಂದಾಯ ಶಾಖೆ ಸಂತೇಮರಳ್ಳಿ ಉಪವಿಭಾಗ
8. ಶ್ರೀ. ಮರಿಸ್ವಾಮಿ : ಕಿರಿಯ ಇಂಜಿನಿಯರ್(ವಿ), ಕಾಗಲವಾಡಿ ಶಾಖೆ
9. ಶ್ರೀ. ಸತೀಶ್ : ಪ್ರಭಾರ ಕಿರಿಯ ಇಂಜಿನಿಯರ್(ವಿ) ಕುದೇರು ಶಾಖೆ
10. ಶ್ರೀ ಬೈರಣ್ಣ : ಕಿರಿಯ ಇಂಜಿನಿಯರ್(ವಿ), ಪ್ರಭಾರ ಗಣಗನೂರು ಶಾಖೆ
11. ಶ್ರೀ ರಾಘವೇಂದ್ರ ಬಿ.ಎಸ್. : ಪ್ರಭಾರ ಕಿರಿಯ ಇಂಜಿನಿಯರ್(ವಿ), ಹೊಂಗನೂರು ಶಾಖೆ

ಸಭೆಯಲ್ಲಿ ಸಂತೇಮರಳ್ಳಿ ಉಪವಿಭಾಗಕ್ಕೆ ಸಂಬಂಧಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಅನುಪಾಲನೆ |
|---|---|---|---|
| 1. | ಶ್ರೀ ಗುರುರಾಜ್ ತೆಳ್ಳನೂರು | * ತೆಳ್ಳನೂರು ಮತ್ತು ಬಾಣಹಳ್ಳಿ ಗ್ರಾಮಗಳಿಗೆ ನಿರಂತರಜ್ಯೋತಿ ವಿದ್ಯುತ್ ಸಂಪರ್ಕ ಕಲ್ಪಿಸಲು ಮನವಿ. | * ತೆಳ್ಳನೂರು ಮತ್ತು ಬಾಣಹಳ್ಳಿ ಗ್ರಾಮಗಳಿಗೆ ನಿರಂತರಜ್ಯೋತಿ ವಿದ್ಯುತ್ ಸಂಪರ್ಕ ಕಲ್ಪಿಸುವ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಕಾಮಗಾರಿಯು ಒಂದು ತಿಂಗಳೊಳಗೆ ಪೂರ್ಣಗೊಳಿಸಲು ಅಧೀಕ್ಷಕ ಇಂಜಿನಿಯರ್(ವಿ) ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |
| 2. | ಶ್ರೀ ಪುರುಷೋತ್ತಮ್ ಪತ್ರಕರ್ತ | * ಜನ್ನೂರು ಗ್ರಾಮದ ಶಾಲೆಯಲ್ಲಿ ಎರಡು ಮೀಟರ್‌ಗಳಿದ್ದು, ಅದರಲ್ಲಿ ಒಂದು ಮೀಟರ್‌ನ್ನು ಶಾಶ್ವತ ವಿದ್ಯುತ್ ನಿಲುಗಡೆಗೊಳಿಸಲು ಅರ್ಜಿ ಸಲ್ಲಿಸಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಗಣಗನೂರು ಶಾಖಾಧಿಕಾರಿಯವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು. |
| 3. | ಶ್ರೀ ಮಹದೇವಸ್ವಾಮಿ ಕಮರವಾಡಿ | * ಕಮರವಾಡಿ-ಬಾಗಳಿ ಚಾನಲ್ ರಸ್ತೆಯಲ್ಲಿ 11ಕೆ.ವಿ. ಲೈನ್ ಜೋತುಬಿದ್ದಿರುವ ಬಗ್ಗೆ. | * ಜೋತುಬಿದ್ದಿರುವ 11ಕೆ.ವಿ. ಲೈನ್‌ಗೆ ಮಧ್ಯಂತರ ಕಂಬಗಳನ್ನು ಅಳವಡಿಸಲು ಅಧೀಕ್ಷಕ ಇಂಜಿನಿಯರ್(ವಿ) ರವರು ಗಣಗನೂರು ಶಾಖಾಧಿಕಾರಿಯವರಿಗೆ ತಿಳಿಸಿದರು. |

| | | | |
|---|---|---|---|
| 4. | ಶ್ರೀ ಶಂಕರ್ ಸಂತೇಮರಳ್ಳಿ | * ಜಮೀನಿನ ಮೇಲೆ ಹಾದುಹೋಗಿರುವ 11ಕೆ.ವಿ. ಲೈನನ್ನು ಸ್ಥಳಾಂತರಿಸಲು ಕೋರಿ. | * ಸದರಿ ಸ್ಥಳವನ್ನು ಪರಿಶೀಲಿಸಿ ಸ್ವಯಂ ನಿರ್ವಹಣಾ ಕಾಮಗಾರಿ ಯೋಜನೆಯಡಿಯಲ್ಲಿ 11ಕೆ.ವಿ ಲೈನನ್ನು ಸ್ಥಳಾಂತರಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ದೂರುದಾರರಿಗೆ ನೀಡಲು ಅಧೀಕ್ಷಕ ಇಂಜಿನಿಯರ್(ವಿ) ರವರು ಕುದೇರು ಶಾಖಾಧಿಕಾರಿಯವರಿಗೆ ತಿಳಿಸಿದರು. |
| | | * ಮೀಟರ್‌ಗಳನ್ನು ಬದಲಿಸುವ ಬಗ್ಗೆ ಮಾಹಿತಿ. | * ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಜ್ಯೋತಿ ಯೋಜನೆಯಡಿಯಲ್ಲಿ ಎಲೆಕ್ಟ್ರೊ ಮೆಕ್ಯಾನಿಕಲ್ ಮೀಟರ್‌ಗಳನ್ನು ಬದಲಿಸಿ, ಸ್ಟ್ಯಾಟಿಕ್ ಮೀಟರ್‌ನ್ನು ಅಳವಡಿಸಲಾಗುತ್ತಿದೆಯೆಂದು ಅಧೀಕ್ಷಕ ಇಂಜಿನಿಯರ್(ವಿ) ರವರು ತಿಳಿಸಿದರು. |
| 5. | ಶ್ರೀ ಮಹದೇವಸ್ವಾಮಿ ದೇಮಹಳ್ಳಿ | * ನಿಗಧಿತ ಶುಲ್ಕ ಅಧಿಕವಾಗಿರುವ ಬಗ್ಗೆ ಮಾಹಿತಿ ಕೇಳಿರುತ್ತಾರೆ. | * ನಿಗಧಿತ ಶುಲ್ಕವನ್ನು ಕೆ.ಇ.ಆರ್.ಸಿ. ನಿಯಮದ ಪ್ರಕಾರ ವಿಧಿಸಲಾಗಿರುತ್ತದೆ ಎಂದು ಅಧೀಕ್ಷಕ ಇಂಜಿನಿಯರ್(ವಿ)ರವರು ತಿಳಿಸಿದರು. |
| | | * ಎಲ್.ಇ.ಡಿ.ಬಲ್ಬ್‌ಗಳನ್ನುಸಂತೇಮರಳ್ಳಿ ಉಪವಿಭಾಗದಲ್ಲಿ ಮಾರಾಟ ಮಾಡಲು ಮನವಿ ಸಲ್ಲಿಸಿದ್ದಾರೆ. | * ವಾರದಲ್ಲಿ ಒಂದು ದಿನ ಎಲ್.ಇ.ಡಿ. ಬಲ್ಬ್‌ಗಳ ಮಾರಾಟ ವ್ಯವಸ್ಥೆಯನ್ನು ಉಪವಿಭಾಗ ಕಛೇರಿಯ ಆವರಣದಲ್ಲಿ ಕಲ್ಪಿಸುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ತಿಳಿಸಿರುತ್ತಾರೆ. |
| 6. | ಶ್ರೀ ರಾಜೇಂದ್ರ ದೇಮಹಳ್ಳಿ | * ಶಾರ್ಟ್ ಸರ್ಕ್ಯೂಟ್‌ನಿಂದ 1.5 ಎಕರೆ ಪ್ರದೇಶದಲ್ಲಿ ಬೆಳೆ ನಾಶವಾಗಿ ಪರಿಹಾರ ನೀಡಲು ಮನವಿ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸಂಬಂಧಿಸಿ ದಾಖಲೆಗಳನ್ನು ಸಲ್ಲಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರಿಗೆ ತಿಳಿಸಿದರು. |
| 7. | ಶ್ರೀ ದಿವಾಕರ್ ಹೊಸಪುರ | * ಯು.ಎನ್.ಐ.ಪಿ.ಯೋಜನೆಯಡಿಯಲ್ಲಿ ಪರಿವರ್ತಕವನ್ನು ಅಳವಡಿಸಿಕೊಡಲು ಮನವಿ ಸಲ್ಲಿಸಿರುತ್ತಾರೆ. | * ಅಕ್ರಮ ಸಕ್ರಮ ಯೋಜನೆಯಡಿ ಅನಧಿಕೃತ ಪಂಪ್‌ಸೆಟ್ ಸಕ್ರಮಗೊಳಿಸಲು ಉಪವಿಭಾಗದಲ್ಲಿ ಶುಲ್ಕವನ್ನು ಭರಿಸಲು ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು. |

1/1/19

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಚಾ.ನಗರ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಸಂತೇಮರಳ್ಳಿ ಉಪವಿಭಾಗ ರವರ ಮಾಹಿಗಾಗಿ.
7. ಹಿಆಸ/ಪ್ರಕ/ಕಡತ.